ಕರ್ನಾಟಕ ಸರ್ಕಾರ

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

# ನಾಗರಿಕ ಸನ್ನದು

# “ಮುನ್ನುಡಿ”

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು, ಸಾರ್ವಜನಿಕ ವಲಯದ ಅತ್ಯಂತ ಪ್ರಮುಖ ಇಲಾಖೆಯಾಗಿದ್ದು, ಮುಖ್ಯವಾಗಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಆಸರೆಯಾಗಿ ಕಾರ್ಯನಿರ್ವಹಿಸುತ್ತಿದೆ. ಎಲ್ಲಾ ವರ್ಗದ ಕುಟುಂಬಗಳಿಗೂ ಆಹಾರ ಭದ್ರತೆ ಹಾಗೂ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ ಇಲಾಖೆಯ ಪ್ರಮುಖ ಗುರಿಯಾಗಿದ್ದು, ಇದಕ್ಕಾಗಿ ಲೆವಿ ಸಂಗ್ರಹಣೆ, ಕನಿಷ್ಟ ಬೆಂಬಲ ಬೆಲೆ ಯೋಜನೆ ಇತ್ಯಾದಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

ಪೆಟ್ರೋಲಿಯಂ ಹಾಗೂ ತೈಲ ಉತ್ಪನ್ನಗಳ ಮೇಲೆಯೂ ಇಲಾಖೆಯು ನಿಯಂತ್ರಣ ಹೊಂದಿದ್ದು, ಕಲಬೆರಕೆ ತಡೆಯುವುದು, ನಿಗಧಿತ ಪ್ರಮಾಣ/ದರದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯ ಆಹಾರ ಪದಾರ್ಥಗಳ ವಿತರಣೆ ಇತ್ಯಾದಿ ಹೊಣೆಗಾರಿಕೆಯನ್ನು ಸಹ ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ.

ಗ್ರಾಹಕರ ಹಾಗೂ ಅವರ ಹಕ್ಕುಗಳ ಬಗ್ಗೆ ತಿಳುವಳಿಕೆ ಮೂಡಿಸಲು ಇಲಾಖೆಯು ಎಲ್ಲಾ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಇಲಾಖೆಯಲ್ಲಿ ಎಲ್ಲಾ ಕಾರ್ಯ ಚಟುವಟಿಕೆಗಳು ಕೇಂದ್ರ ಸರ್ಕಾರದ ಅಗತ್ಯ ವಸ್ತುಗಳ ಕಾಯ್ದೆ, 1955 ರಡಿ ನಿಯಂತ್ರಿಸಲ್ಪಡುತ್ತಿದ್ದು, ಸ್ಥಳೀಯವಾಗಿ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಇದೇ ಕಾಯ್ದೆಯಡಿ ಹಲವು ಶಾಸನ ಬದ್ಧ ಆದೇಶಗಳನ್ನು ಜಾರಿಗೊಳಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದ್ದು, ಇಲಾಖೆಯ ಕಾರ್ಯಕ್ರಮಗಳ ಕಿರುಪರಿಚಯದ ಹೊತ್ತಿಗೆಯೇ ಈ ನಾಗರಿಕ ಸನ್ನದು. ಈ ಮಾಹಿತಿಯನ್ನು ಸಿದ್ಧಪಡಿಸುವಲ್ಲಿ ಶ್ರಮಿಸಿದ ಎಲ್ಲಾ ಅಧಿಕಾರಿ/ನೌಕರರಿಗೆ ಅಬಿನಂದನೆಯನ್ನು ಸಲ್ಲಿಸುತ್ತಾ ಇದರ ಪ್ರಯೋಜನವನ್ನು ಸಾರ್ವಜನಿಕರು ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ಆಯುಕ್ತರು,

ಆಹಾರ, ನಾಗರಿಕ ಸರಬರಾಜು

ಮತ್ತು

ಗ್ರಾಹಕರ ವ್ಯವಹಾರಗಳ

ಇಲಾಖೆ,

ಬೆಂಗಳೂರು.

ಸೂಚಿ

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ನಾಗರಿಕ ಸನ್ನದು


| ಂ. | ವಿಷಯ | ಪುಟಗಳ ಸಂಖ್ಯೆ. |
|---|---|---|
| | ಸಾರ್ವಜನಿಕ ಪಡಿತರ ವಿತರಣಾ ಪದ್ದತಿ :-<br>ಪಡಿತರ ಚೀಟಿಗಳು.<br>(1) ಬಿಪಿಎಲ್<br>(2) ಅನ್ನಪೂರ್ಣ ಯೋಜನೆ.<br>(3) ಅಂತ್ಯೋದಯ ಅನ್ನ ಯೋಜನೆ.<br>(4) ಎಪಿಎಲ್. | |
| | ಪಡಿತರ ವಿತರಣಾ ಮೇಲುಸ್ತುವಾರಿ. | |
| | ಆಹಾರ ಭದ್ರತಾ ಸಮಿತಿ, ಆಹಾರ ಅದಾಲತ್, ಆಹಾರ ಖಾತರಿ ಸಮಿತಿ, ಜಾಗೃತಿ ಸಮಿತಿ. | |
| | ನಾಗರಿಕ ಸರಬರಾಜು ವಿಭಾಗ | |
| | ಪೆಟ್ರೋಲ್,ಡೀಸಲ್ ಪೆಟ್ರೋಲಿಯಂ ಉತ್ಪನ್ನಗಳು ಖಾದ್ಯತೈಲ, ಲ್ಯೂಬ್ರಿಕೇಟಿಂಗ್ ಆಯಿಲ್ ಮತ್ತು ಗ್ರೀಸ್ ಮತ್ತು ಅಡುಗೆ ಅನಿಲ | |
| | ಗ್ರಾಹಕರ ವ್ಯವಹಾರಗಳು. | |
| | ಗ್ರಾಹಕರ ಹಕ್ಕುಗಳು. | |
| | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ. | |
| | ಗ್ರಾಹಕ ಮಾರ್ಗದರ್ಶಿ ಕೋಶ. | |
| | ರಾಜ್ಯ ಗ್ರಾಹಕರ ಕಲ್ಯಾಣ ನಿಧಿ. | |
| | ರಾಜ್ಯ ಗ್ರಾಹಕ ರಕ್ಷಣಾ ಪರಿಷತ್. | |
| | ಜಿಲ್ಲಾ ಗ್ರಾಹಕ ರಕ್ಷಣಾ ಪರಿಷತ್. | |
| | ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ. | |
| | ರಾಷ್ಟ್ರೀಯ ಗ್ರಾಹಕರ ದಿನಾಚರಣೆ. | |
| | ಶಾಲಾ ಗ್ರಾಹಕರ ಕ್ಲಬ್. | |
| | ಗ್ರಾಹಕರ ಅದಾಲತ್. | |
| | ನಾಗರಿಕ ಸನ್ನದು | |
| | ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆಯುವ ಬಗ್ಗೆ | |

# <u>ಸಾರ್ವಜನಿಕ ವಿತರಣಾ ಪದ್ಧತಿ</u>

ಕರ್ನಾಟಕ ರಾಜ್ಯದಲ್ಲಿ ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪಡಿತರ ವಿತರಣಾ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯನ್ವಯ ವಿವಿಧ ಮೂಲಗಳಿಂದ ಗುರುತಿಸಲ್ಪಟ್ಟ ದುರ್ಬಲ ವರ್ಗದವರಿಗೆ/ಬಡತನ ರೇಖೆಗಿಂತ ಕೆಳಗಿನ ಕುಟುಂಗಳಿಗೆ ಪಡಿತರ ವಸ್ತುಗಳ ವಿತರಣೆಯನ್ನು ಹಾಗೂ ಇತರೆ ಎಲ್ಲಾ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಒದಗಿಸಲು ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗುತ್ತಿರುವ ಪಡಿತರ ವಸ್ತುಗಳನ್ನು ಫಲಾನುಭವಿ ಕುಟುಂಬಗಳಿಗೆ ಘಟಕಾಧಾರಿತ ಪದ್ಧತಿಯನ್ವಯ ನಿಗಧಿತ ಮಾರ್ಗದಲ್ಲಿ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ.

ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಪಡಿತರ ವಸ್ತುಗಳನ್ನು, ಇಲಾಖೆಯ ಆಯುಕ್ತರು ಜಿಲ್ಲಾವಾರು ಬೇಡಿಕೆಯನ್ನು ಆದರಿಸಿ ಹಂಚಿಕೆಯನ್ನು ಮಾಡುತ್ತಾರೆ. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕುವಾರು ಬೇಡಿಕೆಯನ್ನು ಆದರಿಸಿ ಮರುಹಂಚಿಕೆಯನ್ನು ಕೈಗೊಳ್ಳುವರು. ತಾಲ್ಲೂಕಿನಲ್ಲಿ ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯತ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅನೌಪಚರಿಕ ಪಡಿತರ ಅಧಿಕಾರಿಗಳು ನ್ಯಾಯಬೆಲೆ ಅಂಗಡಿವಾರು ಮರುಹಂಚಿಕೆಯನ್ನು ಮಾಡುವರು.

ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಪಡಿತರ ವಸ್ತುಗಳನ್ನು, ಭಾರತ ಆಹಾರ ನಿಗಮದಿಂದ, ಸಗಟು ವಿತರಣಾ ಕೇಂದ್ರಗಳಿಗೆ ಹಾಗೂ ಸಗಟು ವಿತರಣಾ ಕೇಂದ್ರದಿಂದ ನ್ಯಾಯಬೆಲೆ ಅಂಗಡಿಯ ಬಾಗಿಲಿಗೆ, ಅಧಿಕೃತ ಸಾಗಾಣಿಕಾ ಗುತ್ತಿಗೇದಾರರ ಮೂಲಕ ತಲುಪಿಸುವ ವ್ಯವಸ್ಥೆ ಜಾರಿಯಲ್ಲಿದೆ. ಸೀಮೆಎಣ್ಣೆಯನ್ನು ಸಂಬಂಧಿಸಿದ ತೈಲ ಕಂಪನಿಗಳ ಮುಂಖಾಂತರ, ಅಧಿಕೃತ ಸಗಟು ಪರವಾನಗಿದಾರರು ಹಾಗೂ ಅಲ್ಲಿಂದ ನ್ಯಾಯಬೆಲೆ ಅಂಗಡಿಗಳಿಗೆ ತಲುಪಿಸುವ ಪಾರದರ್ಶಕ ಪದ್ಧತಿ ಜಾರಿಯಲ್ಲಿದೆ.

ನ್ಯಾಯಬೆಲೆ ಅಂಗಡಿಗಳು ಫಲಾನುಭವಿ ಕುಟುಂಬಗಳಿಗೆ ಪಡಿತರ ವಸ್ತುಗಳನ್ನು ತಲುಪಿಸುವ ಮುಖ್ಯವಾಹಿನಿಗಳಾಗಿದ್ದು, ನಿಗಧಿತ ದರ ಹಾಗೂ ಪ್ರಮಾಣದಲ್ಲಿ ವಿತರಣೆಯ ಉಸ್ತುವಾರಿಗೆ ಸ್ಥಳೀಯ ಕಾರ್ಯಕಾರಿ ಸಿಬ್ಬಂದಿ ಕಾರ್ಯನಿರ್ವಹಿಸುವರು. ಹೆಚ್ಚಿನ ಪಾರದರ್ಶಕ ವಿತರಣೆಗಾಗಿ ನ್ಯಾಯಬೆಲೆ ಅಂಗಡಿವಾರು ಜಾಗೃತ ಸಮಿತಿಗಳನ್ನು ರಚಿಸಲಾಗಿದ್ದು, ಅವರಿಗೂ ಸಹ ನಿರ್ದಿಷ್ಟ ಅಧಿಕಾರವನ್ನು ನೀಡಲಾಗಿರುತ್ತದೆ. ಈ ಎಲ್ಲಾ ವಿತರಣಾ ವ್ಯವಸ್ಥೆಯನ್ನು ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ) ನಿಯಂತ್ರಣ ಆದೇಶ 1992ರಡಿ ನಿಯಂತ್ರಿಸಲಾಗುತ್ತಿದೆ.

I ಪಡಿತರ ಚೀಟಿಗಳು:-

(1) ಅಕ್ಷಯ (ಬಿಪಿಎಲ್) :

ಅರ್ಹರು:-

- ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ವರಮಾನ ರೂ. 12,000/- ಹಾಗೂ ಅದಕ್ಕಿಂತ ಕಡಿಮೆ.
- ಪಟ್ಟಣ ಪ್ರದೇಶಗಳಲ್ಲಿ ವಾರ್ಷಿಕ ವರಮಾನ ರೂ. 17,000/- ಹಾಗೂ ಅದಕ್ಕಿಂತ ಕಡಿಮೆ.

ಅನರ್ಹರು:-

1) 3 ಹೆಕ್ಟೇರ್‌ಗಿಂತಲೂ ಹೆಚ್ಚಿಗೆ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವವರು.
2) ಸ್ಥಿರ ದೂರವಾಣಿ ಹೊಂದಿರುವವರು.
3) ಲೂನಾ/ಟಿ.ವಿ.ಎಸ್. ಮೊಪೆಡ್ ಹೊರತುಪಡಿಸಿ ಸ್ವಂತವಾಗಿ ಯಾವುದೇ ಪೆಟ್ರೋಲ್/ಡೀಸಲ್ ಇಂದನ ಬಳಸುವ ವಾಹನ ಹೊಂದಿರುವವರು.
4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ ರೂ.1 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.
5) ಬೋರ್‌ವೆಲ್ ಹೊಂದಿ ನೀರಾವರಿ ಸೌಕರ್ಯ ಪಡೆಯುತ್ತಿರುವವರು.
6) ತಿಂಗಳಿಗೆ ರೂ.1000-00ಕ್ಕಿಂತ ಅಧಿಕ ವೇತನ ಪಡೆಯುತ್ತಿರುವ ಸರ್ಕಾರಿ/ ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು.
7) ಆದಾಯ ತೆರಿಗೆ ಪಾವತಿಸುವವರು.
8) ರಿಜಿಸ್ಟರ್ಡ್ ಕಂಟ್ರಾಕ್ಟರ್ಸ್, ಎ.ಪಿ.ಎಂ.ಸಿ ವ್ಯಾಪಾರಸ್ಥರು, ಕಮೀಶನ್ ಏಜೆಂಟರುಗಳು, ಬಿತ್ತನೆ ಬೀಜ/ ಗೊಬ್ಬರ (Fertilizer) ವರ್ತಕರು ಇತ್ಯಾದಿ.
9) ಸಮೀಕ್ಷೆಯ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನೂ ಪರಿಶೀಲಿಸಿ ನಿರ್ಣಯಿಸಲಾಗುವುದು.

ಪ್ರತಿ ಕಾರ್ಡುವಾರು ಮಾಸಿಕ ಹಂಚಿಕೆ ವಿವರ :

ಘಟಕ ಪದ್ಧತಿ :- ಸರ್ಕಾರದ ಆದೇಶ ಸಂಖ್ಯೆ:ಆನಾಸ 244 ಡಿಆರ್‌ಎ 2006 (ಭಾಗ-1), ದಿನಾಂಕ: 11-01-2007ರ ರೀತ್ಯಾ ದಿನಾಂಕ:1-2-2007ರಿಂದ ಜಾರಿಗೆ ಬಂದಿರುವಂತೆ "ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ, 1 ಕೆ.ಜಿ. ಗೋಧಿ/ರಾಗಿ. (ಪ್ರತಿ ಚೀಟಿಗೆ ಗರಿಷ್ಠ 25 ಕೆ.ಜಿ. ಆಹಾರ ಧಾನ್ಯಗಳ ಮಿತಿಗೆ ಒಳಪಟ್ಟು)".

| ಪದಾರ್ಥಗಳು | ಗರಿಷ್ಠ ಪ್ರಮಾಣ (ಕೆ.ಜಿ. ಗಳಲ್ಲಿ) | | | ದರ (ರೂ.ಗಳಲ್ಲಿ) | | |
|---|---|---|---|---|---|---|
| | ಗ್ರಾ | ಪ | ಅಪ | ಗ್ರಾ | ಪ | ಅಪ |
| ಅಕ್ಕಿ | 20 | 20 | 20 | 3.00 | 3.00 | 3.00 |
| ಗೋಧಿ | 5 | 5 | 5 | 3.00 | 3.00 | 3.00 |
| ಸಕ್ಕರೆ | 3 | 3 | 3 | 13.50 | 13.50 | 13.50 |
| ಸೀಮೆಎಣ್ಣೆ (ಲೀ. ಗಳಲ್ಲಿ) ಅನಿಲ ರಹಿತ ಕಾರ್ಡುಗಳಿಗೆ ಮಾತ್ರ | 4 | 6 | 8 | ರೂ. 9.30 ರಿಂದ ರೂ. 10.30 ವರೆಗೆ. (ಪ್ರತಿ ಲೀಟರ್ ಗೆ) | | |

(ಷರಾ : ಗ್ರಾ - ಗ್ರಾಮಾಂತರ, ಪ - ಪಟ್ಟಣ, ಅಪ - ಅನೌಪಚಾರಿಕ ಪಡಿತರ ಪ್ರದೇಶ.)

ಟಿಪ್ಪಣಿ :- ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಆಹಾರ ಧಾನ್ಯಗಳು ಹಾಗೂ ರಾಜ್ಯದಲ್ಲಿನ ಪಡಿತರ ಚೀಟಿಗಳ ಸಂಖ್ಯೆಯ ಆಧಾರದ ಮೇರೆಗೆ ಆಹಾರ ಧಾನ್ಯಗಳು ಹಾಗೂ ಸೀಮೆಎಣ್ಣೆಯ ವಿತರಣೆಯ ಪ್ರಮಾಣದಲ್ಲಿ ಆಗಿಂದಾಗ್ಗೆ ಏರುಪೇರು ಉಂಟಾಗುತ್ತದೆ.

(2) ಅನ್ನಪೂರ್ಣ ಯೋಜನೆ:- ಆದೇಶ ಸಂಖ್ಯೆ:ಸಿಎಫ್ಎಸ್:ಸವಿ:II:5:04-05, ದಿನಾಂಕ:19-11-2004.

ಕೇಂದ್ರ ಸರ್ಕಾರದ ಈ ಯೋಜನೆಯಡಿ ಪ್ರತಿ ತಿಂಗಳು 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡಲಾಗುವುದು.

- 65 ವರ್ಷ ಮೀರಿ ವೃದ್ದಾಪ್ಯ ವೇತನವನ್ನು ಪಡೆಯದೇ ಇರುವ ವ್ಯಕ್ತಿಗಳು ಹಾಗೂ ಯಾವುದೇ ಮೂಲ ಆದಾಯ ಇಲ್ಲದೆ ಇರುವ ವ್ಯಕ್ತಿಗಳು ಅರ್ಹರಾಗಿರುತ್ತಾರೆ.

(3) ಅಂತ್ಯೋದಯ ಅನ್ನ ಯೋಜನೆ:- ಆದೇಶ ಸಂಖ್ಯೆ:ಸಿಎಫ್ಎಸ್:ಪಿಡಿ:II:08:2003-04, ದಿನಾಂಕ: 29-08-2003.

ಫಲಾನುಭವಿಗಳು:-

- ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಲ್ಲಿ ಕಡುಬಡವರು :- ಅಂದರೆ
- ವಿಧವೆಯರು, ಅಂಗವಿಕಲರು:ದುರ್ಬಲ ವ್ಯಕ್ತಿಗಳು/ ಮಾನಸಿಕ ಅಸ್ವಸ್ಥರು/ಆರ್ಥಿಕ ಸಾಮಾಜಿಕ ಭದ್ರತೆ ಇಲ್ಲದೆ 60 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರು.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಕೃಷಿ ಕೂಲಿ ಕಾರ್ಮಿಕರು.
- ಎಲ್ಲಾ ಗುಡ್ಡಗಾಡು/ಬುಡಕಟ್ಟು/ಆದಿವಾಸಿ (Primitive tribal group) ಗುಂಪುಗಳು.

ಪ್ರತಿ ಕಾರ್ಡುವಾರು ಮಾಸಿಕ ಹಂಚಿಕೆ ವಿವರ :

| ಪದಾರ್ಥಗಳು | ಗರಿಷ್ಠ ಪ್ರಮಾಣ (ಕೆ.ಜಿ. ಗಳಲ್ಲಿ) | | | ದರ (ರೂ.ಗಳಲ್ಲಿ) | | |
|---|---|---|---|---|---|---|
| | ಗ್ರಾ | ಪ | ಅಪ | ಗ್ರಾ | ಪ | ಅಪ |
| ಅಕ್ಕಿ | 29 | 29 | 29 | 3.00 | 3.00 | 3.00 |
| ಗೋಧಿ | 6 | 6 | 6 | 2.00 | 2.00 | 2.00 |
| ಸಕ್ಕರೆ (ಲಭ್ಯತೆ ಅನುಸಾರ) | 3 | 3 | 3 | 13.50 | 13.50 | 13.50 |
| ಸೀಮೆಎಣ್ಣೆ (ಲೀ. ಗಳಲ್ಲಿ) ಅನಿಲ ರಹಿತ ಕಾರ್ಡುಗಳಿಗೆ ಮಾತ್ರ | 4 | 6 | 8 | ರೂ. 9.30 ರಿಂದ ರೂ. 10.30 ವರೆಗೆ. (ಪ್ರತಿ ಲೀಟರ್ ಗೆ) | | |

(4) ಎಪಿಎಲ್ :

- ಅಕ್ಷಯ, ಅನ್ನಪೂರ್ಣ, ಅಂತ್ಯೋದಯ ಪಡಿತರ ಚೀಟಿಗಳಿಗೆ ನಿಗದಿಪಡಿಸಿರುವ ಅರ್ಹತೆಗಳಿಗೂ ಮೀರಿ ಆದಾಯ ಹೊಂದಿರುವ ಕುಟುಂಬಗಳು ಎಪಿಎಲ್ ಪಡಿತರ ಚೀಟಿಯನ್ನು ಹೊಂದಬಹುದಾಗಿ ರುತ್ತದೆ.
- ಅಡಿಗೆ ಅನಿಲ ಸಂಪರ್ಕ ಹೊಂದಿಲ್ಲದವರು ಲಭ್ಯತೆಯನುಸಾರ ಸೀಮೆಎಣ್ಣೆ ಹಂಚಿಕೆ ಪಡೆಯಲು ಅರ್ಹರಿರುತ್ತಾರೆ.

ಪಡಿತರ ಚೀಟಿಗಳನ್ನು ಪಡೆಯುವ ವಿಧಾನ ಮತ್ತು ಒದಗಿಸಬೇಕಾದ ದಾಖಲೆಗಳು :

- ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಕುಟುಂಬವು ಅವರಿಗೆ ಅನ್ವಯಿಸುವ ಒಂದು ಪಡಿತರ ಚೀಟಿಯನ್ನು ಮಾತ್ರ ಪಡೆಯಲು ಅರ್ಹತೆ ಹೊಂದಿರುತ್ತದೆ.
- ಗಣಕೀಕೃತ ಪಡಿತರ ಚೀಟಿ ಪಡೆಯಲು ಅರ್ಜಿ ನಮೂನೆಗಳನ್ನು ಸಂಬಂಧ ಪಟ್ಟ ಕಛೇರಿಗಳಲ್ಲಿ ನಿಗದಿತ ಶುಲ್ಕ ಪಾವತಿಸಿ ಪಡೆಯಬಹುದಾಗಿರುತ್ತದೆ.
- ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಗಳಿಗೆ ಸಂಬಂಧಿಸಿದಂತೆ ವಲಯಗಳ ಉಪನಿರ್ದೇಶಕರು ಆ.ನಾ.ಸ ಇಲಾಖೆ ರವರಲ್ಲಿ ಅರ್ಜಿ ಸಲ್ಲಿಸಬಹುದು.
- ಜಿಲ್ಲಾ ವ್ಯಾಪ್ತಿಯ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಅರ್ಜಿಗಳನ್ನು ಸಂಬಂಧಪಟ್ಟ ಉಪ / ಸಹಾಯಕ ನಿರ್ದೇಶಕರು, ಆ.ನಾ.ಸ ಇಲಾಖೆ ಅಥವಾ ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ ಸಲ್ಲಿಸಬಹುದು.
- ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಿಸಿದ ಆಯಾ ತಾಲ್ಲೂಕುಗಳ ತಹಶೀಲ್ದಾರ್ ರವರಿಗೆ ಸಲ್ಲಿಸಬಹುದು.
- ಬೇರೆ ಕಾರ್ಡಿನಿಂದ ಹೆಸರನ್ನು ತೆಗೆದ ದೃಢೀಕರಣ ಪತ್ರ (Deletion Certificate), ವಿವಾಹ ದೃಢೀಕರಣ ಪತ್ರ, ಜನನ ಪ್ರಮಾಣ ಪತ್ರ (Birth Certificate), ಮರಣ ಪ್ರಮಾಣ ಪತ್ರ (Death Certificate), ಕಾರ್ಡು ಹಿಂದಿರುಗಿಸಿದ ಅಧ್ಯರ್ಪಣಾ ಪತ್ರ(Surrender Certificate) ಗಳು ಒದಗಿಸಬಹುದಾದ ಅಗತ್ಯ ದಾಖಲೆಗಳು.
- ಮಧ್ಯವರ್ತಿಗಳ ಮೂಲಕ ಸಲ್ಲಿಸುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.
- ವಾಸ ಸ್ಥಳದ ಪುರಾವೆಗಾಗಿ ಈ ಕೆಳಕಂಡ ದಾಖಲೆಗಳಲ್ಲಿ ಒಂದನ್ನು ಒದಗಿಸಬಹುದು.

  (ಅ) ಟೆಲಿಫೋನ್ ಬಿಲ್

  (ಆ) ಎಲ್ ಪಿ ಜಿ ರಶೀದಿ

  (ಇ) ಡ್ರೈವಿಂಗ ಲೈಸನ್ಸ್

  (ಈ) ಪಾಸ್ ಪೋರ್ಟ್

  (ಉ) ಸ್ವೀಕೃತಿಯಾದ ಅಂಚೆ ಪತ್ರ

  (ಊ) ಸರ್ಕಾರಿ / ಸಾರ್ವಜನಿಕ ಉದ್ಯಮ ವಲಯಗಳು ನೀಡಿರುವ ಗುರುತಿನ ಚೀಟಿ

  (ಎ) ಸ್ವಂತ ಮನೆಯ ತೆರಿಗೆ ಸಂದಾಯ ರಶೀದಿ

  (ಏ) ಮತದಾರ ಪಟ್ಟಿಯ ಹೆಸರಿನ ದಾಖಲೆ

  (ಐ) ಬಾಡಿಗೆ ಕರಾರು ಪತ್ರ

  (ಒ) ವಾಸಸ್ಥಳವನ್ನು ಸಾಬೀತು ಪಡಿಸಬಹುದಾದ ಇತರೆ ಯಾವುದೇ ದಸ್ತಾವೇಜು

- ನಿಗದಿತ ನಮೂನೆಯ ಅರ್ಜಿ ಹಾಗೂ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ಆಹಾರ ನಿರೀಕ್ಷಕರು ಸ್ಥಳ ತನಿಖೆಮಾಡಿ ಅರ್ಹತೆಯನ್ನು ಪರಿಶೀಲಿಸಿ ವರದಿ ಸಲ್ಲಿಸುತ್ತಾರೆ.
- ಅಧಿಕೃತವಾಗಿ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಕಾರ್ಯ ನಿಯೋಜನಾ ರಿಜಿಸ್ಟರ್‌ನಲ್ಲಿ (Assignment Register) ಸಹಿ ಪಡೆದು ಕಾರ್ಡ್‌ನ್ನು ವಿತರಿಸಲಾಗುವುದು.

ನ್ಯಾಯಬೆಲೆ ಅಂಗಡಿ :-

ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ) ನಿಯಂತ್ರಣಾ ಆದೇಶ 1992 ರಂತೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಪಡಿತರ ಆಹಾರ ಧಾನ್ಯಗಳನ್ನು ವಿತರಿಸಲು ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಿ, ಸದರಿ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಚೀಟಿಗಳನ್ನು ನಿಯೋಜಿಸಿ ಆಹಾರ ಧಾನ್ಯಗಳ ವಿತರಣೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಪ್ರಸ್ತುತ ಪಡಿತರ ವಿತರಣಾ ವ್ಯವಸ್ಥೆಯಡಿಯಲ್ಲಿ ರಾಜ್ಯದಲ್ಲಿ ದಿನಾಂಕ: 31-1-2008ರಲ್ಲಿದ್ದಂತೆ ಹಾಲಿ 20,301 ನ್ಯಾಯಬೆಲೆ ಅಂಗಡಿಗಳು ಹಾಗೂ 25,780 ಚಿಲ್ಲರೆ ಸೀಮೆಎಣ್ಣೆ ವಿತರಕರು ಇರುತ್ತಾರೆ. ನ್ಯಾಯಬೆಲೆ ಅಂಗಡಿಯನ್ನು ನ್ಯಾಯಬೆಲೆ ಅಂಗಡಿ ಮಾಲೀಕರು ಬೆಳಗ್ಗೆ 8.00 ಗಂಟೆಯಿಂದ 12.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ವಾರದಲ್ಲಿ ಪ್ರತಿ ಮಂಗಳವಾರ ನ್ಯಾಯಬೆಲೆ ಅಂಗಡಿಗಳಿಗೆ ರಜೆಯನ್ನು ಸರ್ಕಾರವು ಘೋಷಿಸಿರುತ್ತದೆ. ಸಮಯಕ್ಕೆ ಸರಿಯಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆದು ಪಡಿತರ ಚೀಟಿದಾರರಿಗೆ ಪಡಿತರ ಪದಾರ್ಥಗಳನ್ನು ಯಾವುದೇ ದೂರುಗಳಿಗೆ ಆಸ್ಪದ ನೀಡದೆ ವಿತರಿಸಬೇಕಾಗುತ್ತದೆ. ಹಾಗೂ ನ್ಯಾಯಬೆಲೆ ಅಂಗಡಿ ಮುಂದೆ ಸೂಚನಾ ಫಲಕವನ್ನು ಪ್ರದರ್ಶಿಸಿ ಅದರಲ್ಲಿ ಪಡಿತರ ಪದಾರ್ಥಗಳ ದಾಸ್ತಾನು, ದರ, ಪ್ರಮಾಣ ಇತ್ಯಾದಿ ವಿವರಗಳನ್ನು ನಮೂದಿಸಬೇಕಾಗಿದ್ದು, ತನಿಖಾ ಪುಸ್ತಕವನ್ನು ಇರಿಸಿ ತನಿಖಾಧಿಕಾರಿಗಳಿಗೆ ಸಹಕರಿಸಬೇಕಾಗಿದೆ.

(5) ಆಹಾರ ಭದ್ರತಾ ಸಮಿತಿ :-

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರನ್ನು ಒಳಗೊಂಡು ಆಹಾರ ಭದ್ರತಾ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ತಿಂಗಳ ಮೊದಲನೇ ಮತ್ತು ಮೂರನೇ ಶನಿವಾರದಂದು ಸಾರ್ವಜನಿಕರ ಕುಂದುಕೊರತೆಗಳನ್ನು ಕೇಳಿ ಸೂಕ್ತ ಪರಿಹಾರ ಒದಗಿಸುತ್ತದೆ.

(6) ಆಹಾರ ಅದಾಲತ್ :-

ಪಡಿತರ ಚೀಟಿದಾರರ ಕುಂದುಕೊರತೆಗಳನ್ನು ನಿವಾರಣೆ ಮಾಡಲು ಆಹಾರ ಅದಾಲತ್‌ಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ.

(7) ಆಹಾರ ಖಾತರಿ ಸಮಿತಿ:-

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತ್‌ಗಳಲ್ಲಿ ಆಹಾರ ಖಾತರಿ ಸಮಿತಿಯನ್ನು ರಚಿಸಲಾಗಿರುತ್ತದೆ. ಗ ್ರಾಮ ಪಂಚಾಯಿತಿಯ ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸದರಿ ಸಮಿತಿಯು $2/3^{rd}$ Quorum ((2/3ರಷ್ಟು ಕೋರಂ) ಇದ್ದಲ್ಲಿ, ಆಹಾರ ನಿರೀಕ್ಷಕರು ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಜೊತೆಯಲ್ಲಿ ತನಿಖೆ ಮಾಡಬಹುದು. ನ್ಯಾಯಬೆಲೆ ಅಂಗಡಿಗಳ ದಾಸ್ತಾನು, ಪುಸ್ತಕಗಳು ಮತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅಗತ್ಯ ವಸ್ತುಗಳು ಸರಿಯಾಗಿ ಸಾರ್ವಜನಿಕರಿಗೆ ತಲುಪುತ್ತಿರುವ ಬಗ್ಗೆ ತನಿಖೆ ಮಾಡಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿಲು ಈ ಸಮಿತಿಗೆ ಅವಕಾಶ ಇರುತ್ತದೆ.

(8) ಜಾಗೃತಿ ಸಮಿತಿ:-

ಪ್ರತೀ ನ್ಯಾಯಬೆಲೆ ಅಂಗಡಿಯ ವ್ಯಾಪ್ತಿಯಲ್ಲಿ ಜಾಗೃತಿ ಸಮಿತಿ ರಚಿಸಲಾಗಿರುತ್ತದೆ. ಸದರಿ ಸಮಿತಿಯಲ್ಲಿ 7 ಜನ ಸದಸ್ಯರು ಇದ್ದು [5-ಮಹಿಳೆಯರು -1-ಪರಿಶಿಷ್ಟ ಜಾತಿ, 1-ಪರಿಶಿಷ್ಟ ಪಂಗಡ, 2-ಹಿಂದುಳಿದ ವರ್ಗ, 1-ಸಾಮಾನ್ಯ ವರ್ಗ,) 1-ಸ್ಥಳೀಯ ಚುನಾಯಿತ ಸದಸ್ಯರು, 1-ಸ್ತ್ರೀ ಶಕ್ತಿ ಗುಂಪಿನ ಅಧ್ಯಕ್ಷರು ಅಥವಾ ಎನ್.ಜಿ.ಒ ಪ್ರತಿನಿಧಿ.ಸದರಿ ಸಮಿತಿಯು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಸೇರಿ ಪಡಿತರ ಪದಾರ್ಥಗಳ ವಿತರಣೆ ಕುರಿತು ಪರಿಶೀಲಿಸಿ ವರದಿ ನೀಡಬೇಕಾಗಿರುತ್ತದೆ.

# II ನಾಗರಿಕ ಸರಬರಾಜು

(1) ಅಗತ್ಯ ವಸ್ತುಗಳ ಕಾಯ್ದೆ,1955 ರ ಕಲಂ 3 ರಂತೆ ಈ ಕೆಳಕಂಡ ಆದೇಶಗಳನ್ನು ಹೊರಡಿಸಲಾಗಿದೆ.

(i) ಮೋಟಾರ್ ಸ್ಪಿರಿಟ್ ಅಂಡ್ ಹೈಸ್ಪೀಡ್ ಡೀಸಲ್ (ರೆಗ್ಯುಲೇಷನ್ ಆಫ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಷನ್ ಆಫ್ ಮಾಲ್ ಪ್ರಾಕ್ಟಿಸಸ್) ಆದೇಶ,2005.

(ii) ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ (ರೆಗ್ಯುಲೇಷನ್ ಆಫ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್) ಆದೇಶ,2000.

(iii) ಎಡಿಬಲ್ ಆಯಿಲ್ ಪ್ಯಾಕೇಜಿಂಗ್ (ರೆಗ್ಯುಲೇಷನ್) ಆದೇಶ, 1998.

(iv) ದಿ ಲ್ಯೂಬ್ರಿಕೇಟಿಂಗ್ ಆಯಿಲ್ಸ್ ಅಂಡ್ ಗ್ರೀಸಸ್ (ಪ್ರೊಸೆಸಿಂಗ್, ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ರೆಗ್ಯುಲೇಷನ್) ಆದೇಶ, 1987.

(v) ದಿ ಕೆರೋಸಿನ್ (ರಿಸ್ಟ್ರಿಕ್ಷನ್ ಆನ್ ಯೂಸ್ ಅಂಡ್ ಫಿಕ್ಸೇಷನ್ ಆಫ್ ಸೀಲಿಂಗ್ ಪ್ರೈಸ್) ಆದೇಶ, 1993.

(vi) ನ್ಯಾಪ್ತಾ (ಅಕ್ವಿಜೇಷನ್, ಸೇಲ್, ಸ್ಟೋರೇಜ್, ಪ್ರಿವೆನ್ಷನ್ ಆಫ್ ಯೂಸ್ ಇನ್ ಆಟೋಮೊಬೈಲ್ಸ್) ಆದೇಶ, 2000.

(vii)ಸಾಲ್ವೆಂಟ್, ರ್‍ಯಾಫಿನೇಟ್ ಅಂಡ್ ಸ್ಲಾಪ್ (ಅಕ್ವಿಜೇಷನ್, ಸೇಲ್, ಸ್ಟೋರೇಜ್, ಪ್ರಿವೆನ್ಷನ್ ಆಫ್ ಯೂಸ್ ಇನ್ ಆಟೋಮೊಬೈಲ್ಸ್) ಆದೇಶ, 2000.

(viii) ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆ ಲೈಸೆನ್ಸಿಂಗ್ ಆದೇಶ 1986.

(ix) ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆ (ಮೇಂಟನೆಸ್ ಆಫ್ ಅಕೌಂಟ್ಸ್, ಡಿಸ್‌ಪ್ಲೆ ಆಫ್ ಪ್ರೈಸಸ್ ಅಂಡ್ ಸ್ಟಾಕ್ಸ್) ಆದೇಶ 1981.

(x)ಪೆಟ್ರೋಲಿಯಂ ಪ್ರಾಡಕ್ಟ್ಸ (ಮೇಂಟನೆಸ್ ಆಫ್ ಪ್ರೊಡಕ್ಷನ್, ಸ್ಟೋರೇಜ್ ಅಂಡ್ ಸಪ್ಲೈ) ಆದೇಶ 1999.

(xi)ಕರ್ನಾಟಕ ರೈಸ್ ಮಿಲ್ಲಿಂಗ್ ರೆಗ್ಯುಲೇಷನ್ ಅಂಡ್ ರೈಸ್ ಅಂಡ್ ಪ್ಯಾಡಿ ಪ್ರೊಕ್ಯೂರ್‌ಮೆಂಟ್ (ಲೆವಿ) ಆದೇಶ 1999.

(xii) ದಿ ರೈಸ್ (ಸ್ಟಾಕ್ ಡಿಕ್ಲರೇಷನ್ ಬೈ ಕಂಪನೀಸ್ ಆರ್ ಫರ್ಮ್ಸ್ ಆರ್ ಇಂಡಿವಿಜಿಯಲ್ಸ್) ಆರ್ಡರ್ 2007.

<u>ಕನಿಷ್ಠ ಬೆಂಬಲ ಬೆಲೆ ಯೋಜನೆ:-</u>

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕೇಂದ್ರ/ರಾಜ್ಯ ಸರ್ಕಾರವು ನಿಗದಿಪಡಿಸುವ MSP ದರದಲ್ಲಿ ಆಹಾರ ಪದಾರ್ಥಗಳನ್ನು ಸಂಗ್ರಹಣೆ ಮಾಡಲಾಗುತ್ತಿದೆ. ಸಂಗ್ರಹಣಾ ಕೇಂದ್ರಗಳಲ್ಲಿ ರೈತರಿಂದ ನೇರವಾಗಿ ಖರೀದಿಸಲಾಗುವುದು ಹಾಗೂ ಮಧ್ಯವರ್ತಿಗಳಿಂದ ಖರೀದಿಸಲು ನಿಷೇಧಿಸಲಾಗಿದೆ.

# III ಗ್ರಾಹಕರ ವ್ಯವಹಾರಗಳು

(1) ಗ್ರಾಹಕರ ಹಕ್ಕುಗಳು:-

ಕೇಂದ್ರ ಸರ್ಕಾರವು 1986ರಲ್ಲಿ ಕೇಂದ್ರ ರಕ್ಷಣಾ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದಿದ್ದು, ಅದರಲ್ಲಿ ನಮೂದಿಸಿರುವ ಗ್ರಾಹಕರ ಪ್ರಮುಖ ಹಕ್ಕುಗಳು ಕೆಳಕಂಡಂತಿವೆ.

(i) ರಕ್ಷಣೆಯ ಹಕ್ಕು.

(ii) ಮಾಹಿತಿ ಪಡೆಯುವ ಹಕ್ಕು.

(iii) ಆಯ್ಕೆಯ ಹಕ್ಕು.

(iv) ದೂರು ನೀಡುವ ಹಕ್ಕು.

(v) ಪರಿಹಾರ ಪಡೆಯುವ ಹಕ್ಕು.

(vi) ಗ್ರಾಹಕರ ಶಿಕ್ಷಣದ ಹಕ್ಕು.

(2) ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ:-

ಗ್ರಾಹಕರು ಅವರು ಖರೀದಿಸುವ ವಸ್ತುಗಳಲ್ಲಿನ ದೋಷದ ಬಗ್ಗೆ ಹಾಗೂ ವಿವಿಧ ಸೇವೆಗಳಲ್ಲಿನ ನ್ಯೂನತೆಗಳ ಬಗ್ಗೆ ದೂರು ಸಲ್ಲಿಸಲು ರಾಜ್ಯ ಆಯೋಗ ಹಾಗೂ ಜಿಲ್ಲಾ ವೇದಿಕೆಗಳಲ್ಲಿ ದೂರು ಸಲ್ಲಿಸಲು ಅವಕಾಶವಿರುತ್ತದೆ. ಸದರಿ ದೂರುಗಳನ್ನು ಯಾವುದೇ ವಕೀಲರ ಸಹಾಯವಿಲ್ಲದೇ ಸಾದಾ ಕಾಗದದಲ್ಲಿ ಸಲ್ಲಿಸಬಹುದು.

- ರೂ.20.00 ಲಕ್ಷಗಳ ವರೆಗಿನ ಪರಿಹಾರಕ್ಕಾಗಿ ಜಿಲ್ಲಾ ವೇದಿಕೆಗಳಿಗೆ ದೂರನ್ನು ಸಲ್ಲಿಸಬಹುದು.
- ರೂ.20.00 ಲಕ್ಷಗಳಿಗಿಂತ ಮೇಲ್ಪಟ್ಟು ರೂ.100.00 ಲಕ್ಷಗಳವರೆಗೆ ಪರಿಹಾರಕ್ಕಾಗಿ ರಾಜ್ಯ ಆಯೋಗಕ್ಕೆ ದೂರು ಸಲ್ಲಿಸಬಹುದು.
- ರೂ.100.00 ಲಕ್ಷಗಳಿಗಿಂತ ಮೇಲ್ಪಟ್ಟ ಪರಿಹಾರಕ್ಕಾಗಿ ರಾಷ್ಟ್ರೀಯ ಆಯೋಗಕ್ಕೆ ದೂರು ಸಲ್ಲಿಸಬಹುದು.

(3) ಗ್ರಾಹಕ ಮಾರ್ಗದರ್ಶಿ ಕೋಶ :-

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಈ ಕೋಶವನ್ನು ತೆರೆಯಲಾಗಿದೆ. ಸದರಿ ಕೋಶದಲ್ಲಿ ಗ್ರಾಹಕರ ಹಕ್ಕುಗಳ ಬಗ್ಗೆ ತಿಳುವಳಿಕೆ, ಕಾನೂನಿನಲ್ಲಿ ಗ್ರಾಹಕರುಗಳಿಗೆ ಒದಗುವ ಸೌಲಭ್ಯಗಳ ಬಗ್ಗೆ ಮಾಹಿತಿ ಹಾಗೂ ಇತರೆ ಗ್ರಾಹಕ ಸಂಬಂಧಿ ವಿಷಯಗಳ ಕುರಿತಾಗಿ ಮಾರ್ಗದರ್ಶನಗಳನ್ನು ನೀಡಲಾಗುತ್ತದೆ.

(4) ರಾಜ್ಯ ಗ್ರಾಹಕರ ಕಲ್ಯಾಣ ನಿಧಿ:-

ರಾಜ್ಯದಲ್ಲಿ ಕರ್ನಾಟಕ ರಾಜ್ಯ ಗ್ರಾಹಕ ಕಲ್ಯಾಣ ನಿಧಿ ನಿಯಮಗಳು, 2005 ನ್ನು ರಚಿಸಿ ಹೊರಡಿಸಲಾಗಿದ್ದು ಇದರಂತೆ ರಾಜ್ಯ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆ. ಸದರಿ ನಿಯಮಗಳಂತೆ ರಾಜ್ಯ ಗ್ರಾಹಕ ಕಲ್ಯಾಣ ನಿಧಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಶಿಫಾರಸ್ಸಿನಂತೆ ಗ್ರಾಹಕರ ಜಾಗ ೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದಲ್ಲದೇ, ವಿವಿಧ ಗ್ರಾಹಕ ಸಂಸ್ಥೆಗಳಿಗೆ ಗ್ರಾಹಕರ ಚಟುವಟಿಕೆಗಳಿಗಾಗಿ ಅನುದಾನ ಬಿಡುಗಡೆ ಮಾಡಲಾಗುವುದು.

(5) ರಾಜ್ಯ ಗ್ರಾಹಕ ರಕ್ಷಣಾ ಪರಿಷತ್ :-

ಗ್ರಾಹಕರ ಹಕ್ಕುಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ, ಕರ್ನಾಟಕ ಗ್ರಾಹಕರ ರಕ್ಷಣಾ ನಿಯಮಾವಳಿಗಳು, 1988 ರ ನಿಯಮ 2 ಎ ಅಡಿಯಲ್ಲಿ ಕರ್ನಾಟಕ ಸರ್ಕಾರವು "ಕರ್ನಾಟಕ ರಾಜ್ಯ ಗ್ರಾಹಕ ರಕ್ಷಣಾ ಪರಿಷತ್" ನ್ನು ರಚಿಸಿ ಆದೇಶ ಹೊರಡಿಸಿರುತ್ತದೆ. ಸದರಿ ಪರಿಷತ್‌ಗೆ ಮಾನ್ಯ ಸಚಿವರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರವರು ಅಧ್ಯಕ್ಷರಾಗಿದ್ದು, ವಿಧಾನ ಸಭಾ/ಪರಿಷತ್ ಸದಸ್ಯರು, ಗ್ರಾಹಕರ ಸಂಸ್ಥೆಗಳ ಪ್ರತಿನಿಧಿಗಳು, ಗ್ರಾಹಕರ ಪ್ರೋತ್ಸಾಹಕರು, ಮಹಿಳಾ ಪ್ರತಿನಿಧಿಗಳು, ವಾಣಿಜ್ಯೋದ್ಯಮಿ ಮತ್ತು ರೈತ ಪ್ರತಿನಿಧಿಗಳು ಅಲ್ಲದೇ, ಗ್ರಾಹಕ ಹಿತಾಸಕ್ತಿಗೆ ಸಂಬಂದಿಸಿದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಯ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ.

(6) ಜಿಲ್ಲಾ ಗ್ರಾಹಕ ರಕ್ಷಣಾ ಪರಿಷತ್ :-

ಗ್ರಾಹಕರ ಹಕ್ಕುಗಳ ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ, ಗ್ರಾಹಕರ ರಕ್ಷಣಾ ಕಾಯ್ದೆ, 1986 (1986 ಕೇಂದ್ರ ಅಧಿನಿಯಮ ಸಂ:68) ರ ಕಲಂ 30ರ (2)ರ ಹಾಗೂ ಕರ್ನಾಟಕ ಗ್ರಾಹಕರ ರಕ್ಷಣಾ ನಿಯಮಾವಳಿಗ ಳು, 1988ರ ನಿಯಮ 2ಸಿ ಅಡಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಕ್ರಿಯ ಗ್ರಾಹಕ ಸಂಸ್ಥೆಗಳು, ಮಹಿಳಾ ಸಹಕಾರಿ ಸಂಘ ಸಂಸ್ಥೆ, ರೈತರ ಸಂಘ ಸಂಸ್ಥೆಗಳು, ವ್ಯಾಪಾರ/ವಾಣಿಜ್ಯ ವಿಭಾಗ, ಸ್ತ್ರೀ ಶಕ್ತಿ ಸಂಸ್ಥೆಯ ಅಧ್ಯಕ್ಷರು, ಯುವಜನ ಸಂಘ ಸಂಸ್ಥೆ ಅಲ್ಲದೇ ಸರ್ಕಾರದಿಂದ ನಾಮಕರಣಗ ೊಂಡ ಸದಸ್ಯರನ್ನೊಳಗೊಂಡಂತೆ ಜಿಲ್ಲಾ ಗ್ರಾಹಕ ರಕ್ಷಣಾ ಪರಿಷತ್ ಗಳನ್ನು ಸ್ಥಾಪಿಸಿಲಾಗಿ ದೆ.

(7) ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ:-

ಅಮೇರಿಕಾ ರಾಷ್ಟ್ರದ ಹಿಂದಿನ ಅದ್ಯಕ್ಷರಾದ ಶ್ರೀ ಜಾನ್ ಎಫ್ ಕೆನಡಿ ರವರು ವಿಶ್ವದ ಎಲ್ಲಾ ಗ್ರಾಹಕರಿಗೆ ಪ್ರಮುಖ ನಾಲ್ಕು ಮೂಲಭೂತ ಹಕ್ಕುಗಳನ್ನು ಘೋಷಣೆ ಮಾಡಿದ ಜ್ಞಾಪಕಾರ್ಥವಾಗಿ ಪ್ರತೀ ವರ್ಷ ಮಾರ್ಚ್ 15 ನ್ನು ವಿಶ್ವದಾದ್ಯಂತ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ.

(8) ರಾಷ್ಟ್ರೀಯ ಗ್ರಾಹಕರ ದಿನಾಚರಣೆ:-

ಗ್ರಾಹಕ ರಕ್ಷಣಾ ಅಧಿನಿಯಮ, 1986ನ್ನು ಭಾರತ ದೇಶದಲ್ಲಿ ಅನುಷ್ಠಾನಗೊಳಿಸಿದ ಜ್ಞಾಪಕಾರ್ಥವಾಗಿ ಪ್ರತೀ ವರ್ಷ ಡಿಸೆಂಬರ್ 24 ನ್ನು ರಾಷ್ಟ್ರದಾದ್ಯಂತ ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ.

(9) ಶಾಲಾ ಗ್ರಾಹಕರ ಕ್ಲಬ್ :-

ಪ್ರಾಥಮಿಕ ಹಂತದಲ್ಲಿಯೇ ಮಾಧ್ಯಮಿಕ/ಫ್ರೌಡ ಶಿಕ್ಷಣ ಶಾಲೆಯ ವಿಧ್ಯಾರ್ಥಿಗಳಿಗೆ ಗ್ರಾಹಕರಿಗೆ ಲಭ್ಯವಿರುವ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡಿ ಜಾಗೃತಗೊಳಿಸಲು "ಶಾಲಾ ಗ್ರಾಹಕರ ಕ್ಲಬ್ ಯೋಜನೆ"ಯನ್ನು ಕೇಂದ್ರ ಸರ್ಕಾರದ ಧನಸಹಾಯದೊಂದಿಗೆ ಸ್ಥಾಪಿಸಲಾಗಿದೆ.

(10) ಗ್ರಾಹಕರ ಅದಾಲತ್ :-

ಮುಖ್ಯವಾಗಿ ಗ್ರಾಮೀಣ ಪ್ರದೇಶದ ಹಾಗೂ ಇತರೆ ಪ್ರದೇಶದ ಗ್ರಾಹಕರಿಗೆ ಲಭ್ಯವಿರುವ ಹಕ್ಕುಗಳು ಹಾಗೂ ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡಲು ಗ್ರಾಹಕರ ಹಕ್ಕುಗಳ ಬಗ್ಗೆ ಆಸಕ್ತಿ ಇರುವ ಸ್ವಯಂ ಸೇವಾ ಸಂಸ್ಥೆಗಳನ್ನು ಒಳಗೊಂಡ ಗ್ರಾಹಕ ಅದಾಲತ್‌ಗಳನ್ನು ವಿವಿಧ ಇಲಾಖೆಗಳು, ಜಿಲ್ಲೆ, ತಾಲ್ಲೂಕು, ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿ ನಡೆಸಲಾಗುತ್ತದೆ.

ನಾಗರಿಕ ಸನ್ನದು :

ನಾಗರಿಕ ಸನ್ನದು ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ, ಜಿಲ್ಲಾ ಪರಿಷತ್ ಗಳಲ್ಲಿ, ತಾಲ್ಲೂಕು ಕಛೇರಿಗಳಲ್ಲಿ, ಉಪನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಮತ್ತು ಆಯುಕ್ತರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರ ಕಛೇರಿಯಲ್ಲಿ ಲಭ್ಯವಿರುತ್ತದೆ.

ಮಾಹಿತಿ ಹಕ್ಕು ಕಾಯ್ದೆಯಡಿ ಇಲಾಖೆಗೆ ಸಂಬಂಧಿಸಿದ ದಾಖಲಾತಿಗಳನ್ನು ಈ ಕೆಳಕಂಡ ಅಧಿಕಾರಗಳಿಂದ ಪಡೆಯಬಹುದಾಗಿರುತ್ತದೆ.

<u>2005ರ ಮಾಹಿತಿ ಹಕ್ಕು ಕಾಯ್ದೆ (2005ರ ಕೇಂದ್ರ ಕಾಯ್ದೆ ನಂ.22) ಸೆಕ್ಷನ್ 5(1) ಸೆಕ್ಷನ್(2) ಮತ್ತು 19(1)ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು:-</u>

| ಸಾರ್ವಜನಿಕ ಪ್ರಾಧಿಕಾರಿಗಳ ಕಛೇರಿಗಳು. | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಆಧಿಕಾರಿ. | ಮೇಲ್ಮನವಿ ಪ್ರಾಧಿಕಾರಿ |
|---|---|---|---|
| ಕೇಂದ್ರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಜಂಟಿನಿರ್ದೇಶಕರು (ನಾ.ಸ.ಮತ್ತುಗ್ರಾ.ವ್ಯ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ವ್ಯವಸ್ಥಾಪಕರು, ಜಂಟಿನಿರ್ದೇಶಕರು (ನಾ.ಸ.ಮತ್ತುಗ್ರಾ.ವ್ಯ) ವಿಭಾಗ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |

| | | | |
|---|---|---|---|
| ಕೇಂದ್ರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಉಪನಿರ್ದೇಶಕರು (ನಾ.ಸ.ಮತ್ತುಗ್ರಾ.ವ್ಯ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ವ್ಯವಸ್ಥಾಪಕರು, ಉಪನಿರ್ದೇಶಕರು (ನಾ.ಸ.ಮತ್ತುಗ್ರಾ.ವ್ಯ) ವಿಭಾಗ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |
| ಕೇಂದ್ರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಮುಖ್ಯಲೆಕ್ಕಾಧಿಕಾರಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಮುಖ್ಯಲೆಕ್ಕಾಧಿಕಾರಿ ಗಳ ಕೇಂದ್ರ ಸ್ಥಾನಿಕ ಸಹಾಯಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |
| ಕೇಂದ್ರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಉಪನಿರ್ದೇಶಕರು (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಸಹಾಯನಿರ್ದೇಶಕರು (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |
| ಕೇಂದ್ರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಆಯುಕ್ತರ ಕೇಂದ್ರ ಸ್ಥಾನಿಕ ಸಹಾಯಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ವ್ಯವಸ್ಥಾಪಕರು, ಆಯುಕ್ತರ ಕಛೇರಿ, (ಆಡಳಿತ ಶಾಖೆ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |

2005ರ ಮಾಹಿತಿ ಹಕ್ಕು ಕಾಯ್ದೆ (2005ರ ಕೇಂದ್ರ ಕಾಯ್ದೆ ನಂ.22) ಸೆಕ್ಷನ್ 5(1) ಸೆಕ್ಷನ್(2) ಮತ್ತು 19(1)ರಡಿಯಲ್ಲಿ ಸಕ್ಷಮ ಅಧಿಕಾರಿಗಳು:-

| ಸಾರ್ವಜನಿಕ ಪ್ರಾಧಿಕಾರಿಗಳ ಕಛೇರಿಗಳು. | ಸಾರ್ವಜನಿಕ ಮಾಹಿತಿ ಅಧಿಕಾರಿ. | ಸಹಾಯಕ ಸಾರ್ವಜನಿಕ ಮಾಹಿತಿ ಆಧಿಕಾರಿ. | ಮೇಲ್ಮನವಿ ಪ್ರಾಧಿಕಾರಿ |
|---|---|---|---|
| ಕೇಂದ್ರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಆಯುಕ್ತರ ಕೇಂದ್ರ ಸ್ಥಾನಿಕ ಸಹಾಯಕರು, ಕೇಂದ್ರ ಕಛೇರಿ. | ಸಹಾಯಕ ನಿರ್ದೇಶಕರು, (ಸಂ.ವಿ), ಕೇಂದ್ರ ಕಛೇರಿ, ಬೆಂಗಳೂರು. | |
| ಅಪರ ನಿರ್ದೇಶಕರ ಕಛೇರಿ (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ಸಹಾಯಕ ನಿರ್ದೇಶಕರು, ಅಪರ ನಿರ್ದೇಶಕರ ಕಛೇರಿ (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | ವ್ಯವಸ್ಥಾಪಕರು, ಅಪರ ನಿರ್ದೇಶಕರ ಕಛೇರಿ (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. | |
| ಜಿಲ್ಲಾ ಮಟ್ಟದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕಛೇರಿ ಗಳಿಗೆ. | ಆಯಾ ಜಿಲ್ಲೆಯ ಉಪನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ವ್ಯವಹಾರಗಳ ಇಲಾಖೆ. | ಸಹಾಯಕ ನಿರ್ದೇಶಕರು/ ಸಹಾಯಕ ನಿರ್ದೇಶಕರು ಇಲ್ಲದಿದ್ದಲ್ಲಿ ಕಛೇರಿ ವ್ಯವಸ್ಥಾಪಕರು. | |
| ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದ ವಲಯ ಕಛೇರಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, | ಆಯಾ ವಲಯದ ಉಪನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ವ್ಯವಹಾರಗಳ ಇಲಾಖೆ. | ಆಯಾ ವಲಯದ ವ್ಯವಸ್ಥಾಪಕರು. | ಅಪರ ನಿರ್ದೇಶಕರ ಕಛೇರಿ (ಸಂ.ವಿ), ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಂ.8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು. |
| ತಾಲ್ಲೂಕು ಮಟ್ಟದ ಕಛೇರಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು. | ಆಯಾ ತಾಲ್ಲೂಕುಗಳ ತಹಶೀಲ್ದಾರ್. | ಆಯಾ ತಾಲ್ಲೂಕುಗಳ ಶಿರಸ್ತೆದಾರಗಳು. | ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು. |

ಆಯುಕ್ತರ ಕಛೇರಿಯ ದೂರವಾಣಿ ಸಂಖ್ಯೆಗಳು:-

| | ಕಛೇರಿ | ಫ್ಯಾಕ್ಸ್ |
|---|---|---|
| ಆಯುಕ್ತರು | 22262187 | 22267205. |
| ಗ್ರಾಹಕ ಮಾರ್ಗದರ್ಶಿ ಕೋಶ | 22372204 | 22372204 |
| ಅಪರ ನಿರ್ದೇಶಕರು(ಸಂ.ವಿ) | 22264062 | 22354856 |
| ಆಯುಕ್ತರ ಕೇಂದ್ರ ಸ್ಥಾನಿಕ ಸಹಾಯಕರು. | 22355070 | |
| ಮುಖ್ಯಲೆಕ್ಕಾಧಿಕಾರಿಗಳು. | 22263862 | |
| ಅಕ್ಷಯ ಕೋಶ | 22204942 | |
| ಜಂಟಿ ನಿರ್ದೇಶಕರು (ನಾ.ಸ.ಮತ್ತುಗ್ರಾ.ವ್ಯ) | 22252205 | |
| ಉಪ ನಿರ್ದೇಶಕರು (ನಾ.ಸ.ಮತ್ತುಗ್ರಾ.ವ್ಯ) | 22373975 | |
| ಅಪರ ನಿರ್ದೇಶಕರು (ಸಂ.ವಿ) ರವರ ಆಪ್ತ ಶಾಖೆ. | 22264062 | |
| ಉಪ ನಿರ್ದೇಶಕರು (ಸಂ.ವಿ) | 22354857. | |

ಆಯುಕ್ತರು,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ನಂ.8, ಕನ್ನಿಂಗ್ ಹ್ಯಾಂ ರಸ್ತೆ,
ಬೆಂಗಳೂರು - 560052.
ದೂರವಾಣಿ ಸಂಖ್ಯೆ : 22262187, 22252205
ಫ್ಯಾಕ್ಸ್ ಸಂಖ್ಯೆ : 22267205
ಇ-ಮೇಲ್ ವಿಳಾಸ : bngfcs@kar.nic.in
Website :-www.ahara.kar.nic.in.